ಸಂಸ್ಕೃತಿ ಎನ್ನುವುದು ಕೇವಲ ಒಂದೇ ತೆರನಾದದ್ದೆ? ನಾರಾಯಣ ಇದನ್ನು ಚೆನ್ನಾಗಿ ಹೇಳಿದ್ದಾರೆ. ಇಲ್ಲಿನ ಸಂಸ್ಕೃತಿಯಲ್ಲಿ ಭೂತ, ವರ್ತಮಾನ ಮತ್ತು ಭವಿಷ್ಯವೂ ಇದೆ. ಇಲ್ಲಿ ಅವಮಾನಿತರು, ಅವಮಾನ ಮಾಡುವವರು ಇದ್ದಾರೆ. ಅಧೀನ ಮತ್ತು ಪ್ರಧಾನವೂ ಇದೆ. ಹೀಗೆ ಅನೇಕ ಸಂಗತಿಗಳು ಸಂಸ್ಕೃತಿಯಲ್ಲಿವೆ. ಇದು ನಿರಂತರವಾಗಿ ಬದುಕ್ತಾ ಬಂದಿದೆ. ಇಲ್ಲಿ ಶ್ರೇಣೀಕರಣವಿದೆ. ಮತ್ತಿನ್ನೇನೊ ಇದೆ. ಇದನ್ನೆಲ್ಲ ನಾವು ಸೂಕ್ಷ್ಮವಾಗಿ ನೋಡಬೇಕೆ ಹೊರತು ಅದನ್ನು ಭ್ರಮಾಧೀನವಾಗಿ ನೋಡಬಾರದು. ಇಲ್ಲಿನ ಸಂಸ್ಕೃತಿಯಲ್ಲಿರುವುದನ್ನೆಲ್ಲ ಚಿನ್ನವಾಗಿ ನೋಡುವ ಅಥವಾ ಇನ್ನೆಲ್ಲಿಂದಲೊ ತಂದುದ್ದನ್ನು ಅರೆಬರೆಯಾಗಿ ನೋಡುವ ಮಾದರಿಗಳೆರಡೂ ದುರ್ಬಲವಾದದ್ದು. ಕನ್ನಡಿಗಳಿನ್ನು ಸಾಕು ಅನ್ನುವುದರಲ್ಲಿ ನಿನ್ನೊಳಗೆ ನೀನು ನೋಡಿಕೊ ಎಂಬ ಬಹು ದೊಡ್ಡ ತತ್ತ್ವವೂ ಇದೆ. ಕ್ರಿಯೇಟಿವ್ ಆದ ಒಂದು ಇಮೇಜನ್ನು ವಿಮರ್ಶೆಯಲ್ಲಿ ಹೇಗೆ ತರಬಹುದು ಅನ್ನೋದಕ್ಕೆ ಒಂದು ಮುಖ್ಯ ನಿದರ್ಶನ ಈ ಲೇಖನ. ನನಗೆ ಮೊದಲಿನಿಂದಲೂ ಈ ಇಂಗ್ಲಿಷ್ ಮೇಷ್ಟ್ರುಗಳು ಬರೆದ ವಿಮರ್ಶೆ ಬಗ್ಗೆ ದೊಡ್ಡ ಸಂಶಯ ಇದೆ. ಕೀರ್ತಿನಾಥ ಕುರ್ತಕೋಟಿ ಅವರನ್ನೂ ಸೇರಿಸಿಕೊಂಡು ಈ ಮಾತು ಹೇಳುತ್ತಿರುವೆ. ಕಂಬಾರರ ಕಾವ್ಯಕ್ಕೆ ಅವರು ಮುನ್ನುಡಿ ಬರೆದಿದ್ದಾರೆ. ರಾಕ್ಷಸಿ ತಾಯಿ ತನ್ನ ಮಗನನ್ನು ಹೇಗೆ ಹಿಂಸಿಸುತ್ತಿದ್ದಳು ಅನ್ನೋ ಭಾಗ ಅವರ 'ಹೇಳತೇನ ಕೇಳ'ದಲ್ಲಿದೆ. ಅದನ್ನ ಕಾವ್ಯ ಎರಡ್ಮೂರು ಅಲಂಕಾರಗಳಲ್ಲಿ ವರ್ಣಿಸ್ತದೆ. ಚಿಗುರನ್ನು ಚಿವುಟುವುದು ಇತ್ಯಾದಿ. ಇದನ್ನು ಕುರಿತು ಕುರ್ತಕೋಟಿಯವರು ಬರೆಯುವುದೇನೆಂದರೆ ಈ ಘಟನೆ ದಾರುಣವಾಗಬಹುದಾಗಿತ್ತು, ಆದರೆ ವರ್ಣನೆಯ ಅತಿವ್ಯಾಪ್ತಿಯಿಂದಾಗಿ ಈ ದಾರುಣತೆಯನ್ನು ಹಿಡಿಯಲಿಕ್ಕೆ ಸಾಧ್ಯವಾಗಿಲ್ಲ ಅಂತ. ಕುವೆಂಪು ಕಾದಂಬರಿಗಳ ಬಗ್ಗೆಯೂ ಎಂ.ಜಿ. ಕೃಷ್ಣಮೂರ್ತಿ ಇಂಥದ್ದೇ ಮಾತನ್ನು ಹೇಳಿದ್ದಾರೆ. ಕನ್ನಡ ನಿರೂಪಣೆಗಳನ್ನ ಹಿಡಿಯಲಿಕ್ಕೆ ಈ ಇಂಗ್ಲಿಷ್ ಮೇಷ್ಟ್ರುಗಳು ಸೋತರು. ಇಂಗ್ಲಿಷ್‌ನ ರೂಪನಿಷ್ಠ ವಿಮರ್ಶೆಯ ಒಂದು ಕವಲಿನಿಂದ ಪ್ರಭಾವಿತವಾದ ಒಂದು ಮಾದರಿಯಿದು. ಅದನ್ನು ಇವರು ದತ್ತು ಮಾಡಿಕೊಂಡು ಕನ್ನಡದ ಅಮಾಯಕ ಬರಹಗಾರರಿಗೆ, ಶುದ್ಧ ದೇಸಿ ಬರಹಗಾರರಿಗೆ ಅನ್ಯಾಯ ಮಾಡಿದ್ರು. ನವ್ಯದ ಇಂಥ ಚಿಂತನೆಯ ಯಾವುದೇ ವಿನ್ಯಾಸ ಬಹಳ ಮುಖ್ಯ ಅಂತ ನಾನು ತಿಳಿದಿಲ್ಲ. ನವ್ಯರು ಭಾಷೆಗೆ ಕೊಡುವ ಮಹತ್ತ್ವದ ಬಗ್ಗೆ ನನಗೆ ಗೌರವ ಇದೆ. ಅದರಲ್ಲಿ ಮತ್ತೆ ನನಗೆ ನನ್ನದೇ ಆದ ತಿಳಿವಳಿಕೆಯಿದೆ. ಅದರಾಚೆಗೆ ಅವರು ಪಶ್ಚಿಮದಿಂದ ಕಡ ತಂದಂಥ ಅನೇಕ ಕಲ್ಪನೆಗಳಿಗೆ ಅಂಥ ಮಹತ್ತ್ವವಿಲ್ಲ ಅಂತನ್ನಿಸಿದೆ. ಭಾಷೆ ಯಾಕೆ ವಿಸ್ತಾರವಾಗ್ತದೆ, ವರ್ಣಕವಾಗ್ತದೆ ಅನ್ನೋದನ್ನು ಅವರು ನೋಡಬಹುದಿತ್ತು. ವರ್ಣಕದ ಕಲ್ಪನೆ ಅವರಿಗೆ ಗೊತ್ತಿರಲಿಲ್ಲ. ಕನ್ನಡದ ವರ್ಣಕಗಳು ಯಾಕೆ ಸೊಕ್ಕುತ್ತವೆ ಅನ್ನೋದು ಅವರಿಗೆ ತಿಳೀಲಿಲ್ಲ. ಕನ್ನಡದ ನಿರೂಪಣೆಗಳ ಗುಣ ಇದು. ಇದೊಂದು ದೋಷವಾಗಿ ಅವರಿಗೆ ಕಾಣಿಸ್ತು. ನಮ್ಮವರು ಕಥೆ ಹೇಳುವವರಲ್ಲ, ಕಥೆಯನ್ನು ಬಣ್ಣಿಸುವವರು. ಯಾವುದನ್ನು ನಾವು ಮೌಖಿಕ ಅಂತ ಕರೀತೀವಿ ಆ ಮೌಖಿಕ ಮಾದರಿಯ ಕಥನ ಕನ್ನಡದ್ದು. ಅದನ್ನ ಬಿಟ್ಟರೆ ಬೇರೆ ಗತಿಯಿಲ್ಲ ನಮಗೆ. ಪಂಪ ಮಾಡಿದ್ದು ಅದನ್ನೇ, ಹರಿಹರ ಮಾಡಿದ್ದು ಅದನ್ನೆ. ಅನೇಕರನ್ನು ಹೆಸರಿಸಬಹುದು. ಬಣ್ಣನೆ ಅಂದ್ರೆ ಸುಮ್ಮನೆ ಬಣ್ಣಿಸುವುದಲ್ಲ. ಸೂಕ್ಷ್ಮ ಅಲಂಕಾರಗಳ ಬಳಕೆಯನ್ನು ನಾವು ಗಮನಿಸಬೇಕು.

- **ಮೇಲಿನ ಪ್ರಶ್ನೆಯನ್ನು ಕಾವ್ಯಮೀಮಾಂಸೆಗೆ ಲಗತ್ತಿಸಿ ಕೇಳಬೇಕು ಅನ್ನಿಸ್ತಿದೆ. ಅನೇಕ ವರ್ಷಗಳಿಂದ ಕಾವ್ಯಮೀಮಾಂಸೆಯ ಚರ್ಚೆಗಳಲ್ಲಿ ನೀವು ಭಾಗವಹಿಸಿದವರು. ಒಬ್ಬ ಚಿಂತಕರಾಗಿ ಕನ್ನಡ ಕಾವ್ಯಮೀಮಾಂಸೆ ಮತ್ತು ಸಂಸ್ಕೃತ ಕಾವ್ಯಮೀಮಾಂಸೆಯ ಸಂಬಂಧವನ್ನು ಹೇಗೆ ನೋಡ್ತೀರಿ? ಈಗ ಕನ್ನಡ ಕಾವ್ಯ ಮೀಮಾಂಸೆಯನ್ನು ಕಟ್ಟುವ ಪ್ರಯತ್ನಗಳು ಎಂಥ ದಾರಿಯನ್ನು ಸವೆಸಿವೆ**